**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,</u>**

**<u>ಸಿದ್ಧಾಪುರ</u>**

**<u>ಸಿ.ಸಿ ನಂ. 82/2021</u>**

**ಫಿರ್ಯಾದಿಃ** **ಶ್ರೀ ನಾಗರಾಜ ರಾಮಚಂದ್ರ ನಾಯ್ಕ,**
**ವಯಸ್ಸು ಅಜಮಾಸ 35 ವರ್ಷ, ಗುತ್ತಿಗೆದಾರರು.**
**ವಿಳಾಸಃ ಹಲಗೇರಿ, ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.**

**-ವಿರುದ್ಧ-**

**ಆರೋಪಿಃ** **ಶ್ರೀ ಮಂಜುನಾಥ ಈಶ್ವರ ನಾಯ್ಕ,**
**ವಯಸ್ಸು ಅಜಮಾಸ 30 ವರ್ಷ, ವ್ಯಾಪಾರ.**
**ವಾಸಃ ಕಿಲಾರಿ (ಹಲಗೇರಿ ), ಸಿದ್ದಾಪುರ ತಾಲ್ಲೂಕು,**
**ಪ್ರಸಕ್ತ ವಾಸ : ಶ್ರೀ ಮಹಾಗಣಪತಿ ಪ್ರುಟ್ಸ,**
**TVS ಷೋರೂಂ ಪಕ್ಕ, ಐದು ರಸ್ತೆ ಸರ್ಕಲ್ ಹತ್ತಿರ,**
**ಶಿರಸಿ, ಉತ್ತರ ಕನ್ನಡ ಜಿಲ್ಲೆ.**

**<u>ಭಾರತೀಯ ದಂಡ ಸಂಹಿತೆ ಕಲಂ 313 ರಡಿ ಆರೋಪಿಯ ಹೇಳಿಕೆ</u>**

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರಃ**

**ಪ್ರಶ್ನೆಃ** 2. **ಫ್ರಾಸಾ-1 ಶ್ರೀ ನಾಗರಾಜ ರಾಮಚಂದ್ರ ನಾಯ್ಕ,** ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರಿಗೆ ಆರೋಪಿತನಾದ ನೀನು ಬಹಳ ಕಾಲದ ಪರಿಚಯದವರಾಗಿದ್ದು ಮೊದಲಿದಿಂದಲೂ ಪಿರ್ಯಾದುದಾರರಿಂದ ನಿನ್ನ ಹಣದ ಅಗತ್ಯತೆಗಾಗಿ ಹಣ ಪಡೆದು ಮರಳಿಸಿದ್ದು ನಂತರ ಆರೋಪಿತನಾದ ನೀನು ಬೆಂಗಳೂರಿನಲ್ಲಿ ಹೋಟೆಲ್ ನಿರ್ವಹಣೆಯ ಅಗತ್ಯಕ್ಕಾಗಿ ದಿನಾಂಕ 20.02.2015 ರಿಂದ ದಿನಾಂಕ 30.04.2015 ರ ತನಕ ಒಟ್ಟು ರೂ. 7,00,000/- ಹಣವನ್ನು ಸಾಲವಾಗಿ ಪಡೆದಿದ್ದು ಅದಕ್ಕಾಗಿ ಒಂದು ಎಗ್ರಿವೆಂಟ ಸಹ ಮಾಡಿದ್ದು ಇರುತ್ತದೆ. ಆದರೆ ಆರೋಪಿತನಾದ ನೀನು ಹಣವನ್ನು ಹಿಂತಿರುಗಿಸಿದ್ದು ಇರುವುದಿಲ್ಲ

ಎಂದು ಆರೋಪಿಯು ನೀನು ಪಡೆದಿದ್ದ ₹7,00,000/- ಸಾಲದ ಹಣಕ್ಕೆ 01-11-2015 ರಿಂದ 31-07-2020 ರವರೆಗೆ ಶೇ.14ರ ಬಡ್ಡಿ ಸೇರಿಸಿ ಒಟ್ಟು ₹13,09,000/- ಪಾವತಿಸಲು ಒಪ್ಪಿಕೊಂಡಿದ್ದು. ಈ ಮೊತ್ತದ ಮರುಪಾವತಿಗಾಗಿ ಆರೋಪಿತನಾದ ನೀನು ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ಶಾಖೆಯವು, ನಂ.555163, 555164 ಮತ್ತು 555165 ಚೆಕಗಳನ್ನು ನೀಡಿದ್ದು ಈ ಪ್ರಕರಣಕ್ಕೆ ಚೆಕ್ ನಂ.555163 ₹3,09,000/- ಮೊತ್ತದ್ದಾಗಿದೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 3 ಫಾ್ರಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಪಿರ್ಯಾದುದಾರರು ಸಾಲದ ಮರುಪಾವತಿಗಾಗಿ ಹಲವು ಬಾರಿ ಬೇಡಿಕೆ ಇಟ್ಟಿದ್ದು ನೀನು ಸಾಲದ ಮರುಪಾವತಿಗಾಗಿ ದಿನಾಂಕ 13.08.2020 ರ SBI Whitefiled branch, Bangalore ನ ಚೆಕ್ಕಿನ ಸಂಖ್ಯೆ 555163 ನ ರೂ.3,09,000/- ನ ಚೆಕನ್ನು ನೀಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 4. ಫಾ್ರಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು SBI., ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 24.08.2020 ರಂದು "Funds Insufficient" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 09.09.2020 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸುನ್ನು ದಿನಾಂಕ:15.09.2020 ರಂದು ನಿನಗೆ ಸದರಿ ನೋಟಿಸ್ಸನ್ನು ತಲುಪಿರುತ್ತದೆ. ಹಾಗೂ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 5**. ಫ್ರಾಸಾಃ1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ತನ್ನ ಮುಖ್ಯವಿಚಾರಣೆಯಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು, ದಿಃ 13-08-2020 ಎಸ್.ಬಿ.ಐ ಬ್ಯಾಂಕ ಮಹದೇವಪುರ ಬೆಂಗಳೂರ ಶಾಖೆಯ ಚೆಕನ್ನು ನಿ.ಸಿ-1 ಎಂದು, ಸಹಿಯನ್ನು ನಿ.ಸಿ-1(ಎ) ಎಂದು, ದಿಃ 18-08-2020ರ ಬ್ಯಾಂಕ್ ಚಲನ್ ನ್ನು ನಿ.ಸಿ-2 ಎಂದು, ದಿಃ 24-08-2020 ರ ಎಸ್.ಬಿ.ಐ ಬ್ಯಾಂಕ ರವರ ಹಿಂಬರಹವನ್ನು ನಿ.ಸಿ-3 ಎಂದು, ದಿಃ 9-9-2020 ರ ಲೀಗಲ ನೋಟೀಸನ್ನು ನಿ.ಸಿ-4 ಎಂದು, ಅಂಚೆ ರಶೀಧಿಯನ್ನು ನಿ.ಸಿ-5 ಎಂದು, ಆರ್.ಪಿ.ಎ.ಡಿ ಸ್ವೀಕೃತಿಯನ್ನು ನಿ.ಪಿ-6 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 6**. **ಫ್ರಾಸಾ-2 ಶ್ರೀ ಭಗವಾನ್ ಮೈಲಾ ನಾಯ್ಕು,** ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, , ತಾನು ಈ ಪ್ರಕರಣದಲ್ಲಿ ದೂರುದಾರರ ಪರ ಸಾಕ್ಷಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಎಂದು, ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳು ಸತ್ಯ ಇರುತ್ತವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದಾಗಿರುತ್ತದೆ ಎಂದು ನುಡಿದಿರುತ್ತಾರೆ. ತನಗೆ ಈ ಪ್ರಕರಣದ ಫಿರ್ಯಾದುದಾರ ಮತ್ತು ಆರೋಪಿಯ ಪರಿಚಯವಿದೆ. ಫಿರ್ಯಾದುದಾರನ ಮನವಿಯಂತೆ, ದಿನಾಂಕ 31-07-2020 ರಂದು ನನ್ನ ಸಮ್ಮುಖದಲ್ಲಿ ಆರೋಪಿಯು ಪಡೆದಿದ್ದ ₹7,00,000/- ಸಾಲದ ಹಣಕ್ಕೆ 01-11-2015 ರಿಂದ 31-07-2020 ರವರೆಗೆ ಶೇ.14ರ ಬಡ್ಡಿ ಸೇರಿಸಿ ಒಟ್ಟು ₹13,09,000/- ಪಾವತಿಸಲು ಒಪ್ಪಿಕೊಂಡನು. ಈ ಮೊತ್ತದ ಮರುಪಾವತಿಗಾಗಿ ಆರೋಪಿಯು ನೀಡಿದ ಮೂರು ಚೆಕ್‌ಗಳ ಬರಹವನ್ನು ಅವನ ಸೂಚನೆಯಂತೆ ನಾನು ಬರೆದು, ನನ್ನ ಸಮ್ಮುಖದಲ್ಲೇ ಆತ ಸಹಿ ಮಾಡಿದನು. ಚೆಕ್‌ಗಳು ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ಶಾಖೆಯವು, ನಂ.555163, 555164 ಮತ್ತು 555165 ಆಗಿದ್ದು, ಈ ಪ್ರಕರಕ್ಕೆ ಸಂಬಂಧಿಸಿದ ಚೆಕ್ ನಂ.555163 ₹3,09,000/- ಮೊತ್ತದ್ದಾಗಿದೆ ಎಂದು ಹಾಗೂ ಸಾಕ್ಷಿಗೆ ಈಗ ನಿಪಿ -1 ಚೆಕನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಅದರಲ್ಲಿರುವ ಬರವಣಿಗೆ ನನ್ನದು ಎಂದು ಸಾಕ್ಷಿಯು ಮುಂದುವರೆದು ನಿಪಿ-1 ರಲ್ಲಿರುವ ಸಹಿ ಆರೋಪಿಯದ್ದು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

ಪ್ರಶ್ನೆಃ 7. ಈ ಪ್ರಕರಣ ಕುರಿತು ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?

**ಉತ್ತರಃ**

ಪ್ರಶ್ನೆಃ 8. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಿಯಾ ?

**ಉತ್ತರಃ**

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **17-08-2026** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**